**ಭಾರತೀಯ ಜನತಾ ಪಾರ್ಟಿ**

**ಕೇಂದ್ರ ಕಚೇರಿ**

**11, ಅಶೋಕ ರಸ್ತೆ, ನವದೆಹಲಿ–110001**

ಫೆಬ್ರವರಿ 28, 2013

**ಲೋಕಸಭಾ ವಿರೋಧ ಪಕ್ಷದ ನಾಯಕಿ ಶ್ರೀಮತಿ ಸುಷ್ಮಾ ಸ್ವರಾಜ್ ಹಾಗೂ**

**ರಾಜ್ಯ ಸಭಾ ವಿರೋಧ ಪಕ್ಷದ ನಾಯಕ ಶ್ರೀ ಅರುಣ್ ಜೇಟ್ಲೆಯವರು ನೀಡಿದ ಹೇಳಿಕೆ**

ಇಂದು ಸಂಸತ್‌ನಲ್ಲಿ ಮಂಡಿಸಲಾದ ಕೇಂದ್ರ ಆಯವ್ಯಯದಿಂದ ಭಾರತೀಯ ಅರ್ಥವ್ಯವಸ್ಥೆಗೆ ಕನಿಷ್ಠ ಲಾಭವೂ ಇಲ್ಲ. ಪ್ರತಿಕೂಲ ಪರಿಸ್ಥಿತಿಯಲ್ಲಿ ಹಣಕಾಸು ಸಚಿವರು ಈ ಮುಂಗಡ ಪತ್ರವನ್ನು ಮಂಡಿಸಿದ್ದಾರೆ. ಯುಪಿಎ ಸರ್ಕಾರದ ನೀತಿ ವೈಕಲ್ಯದಿಂದ ಭಾರತೀಯ ಅರ್ಥವ್ಯವಸ್ಥೆ ಬಿಕ್ಕಟ್ಟು ಪರಿಸ್ಥಿತಿಯನ್ನು ಎದುರಿಸುವಂತಾಗಿದೆ. ಸುಧಾರಣೆಗೆ ಅವಕಾಶವಿಲ್ಲದ ಕಾರಣ ಹಣಕಾಸು ಸಚಿವರು ಅಸಹಾಯಕ ಪರಿಸ್ಥಿತಿಯಲ್ಲಿದ್ದರು. ಆದಕಾರಣ, ನೀತಿ ಹಾಗೂ ತೆರಿಗೆ ಸ್ವರೂಪದಲ್ಲಿ ಔಪಚಾರಿಕ ಬದಲಾವಣೆಗಳನ್ನು ಮಾತ್ರ ಮಾಡಲಾಗಿದೆ. ಮುಂಗಡ ಪತ್ರವು ಕೇವಲ ಮಾತಿನ ಬಂಡವಾಳವಾಗಿದ್ದು ಆಕಾಂಕ್ಷೆ ತರಿಸುವ ಅಂಶಗಳು ಕನಿಷ್ಠ ರೂಪದಲ್ಲಿವೆ. ಭಾರತೀಯ ಉತ್ಪಾದನಾ ಕ್ಷೇತ್ರದ ಉತ್ತೇಜನಕ್ಕೆ ಯಾವುದೇ ಮಾರ್ಗೋಪಾಯಗಳಿಲ್ಲ. ಕೃಷಿ ವಲಯದಲ್ಲಿ ಸರ್ಕಾರದ ನಿರ್ಲಕ್ಷ್ಯ ಮುಂದುವರೆದಿದೆ. ಜನಸಾಮಾನ್ಯರ ಕುರಿತು ಆಡುವ ಔಪಚಾರಿಕ ಮಾತುಗಳು ಸಹ ಅಡಗಿ ಹೋಗಿದೆ. ರಫ್ತು ಉತ್ತೇಜನ, ಹಣದುಬ್ಬರ ನಿಯಂತ್ರಣ ಹಾಗೂ ರೂಪಾಯಿ ಮೌಲ್ಯ ಬಲವರ್ಧನೆಗೆ ಯಾವುದೇ ಕ್ರಮಗಳನ್ನು ಸೂಚಿಸಲಾಗಿಲ್ಲ. ಆರ್ಥವ್ಯವಸ್ಥೆಯ ವೃದ್ಧಿ ದರವನ್ನು ಶೇಕಡ 5ರ ಮಟ್ಟಕ್ಕೆ ಇಳಿಸಲಾಗಿದ್ದು, ಶೇಕಡ 9ರ ವೃದ್ಧಿ ದರದ ಗುರಿ ಸಾಧಿಸಲು ಅನುಸರಿಸಬೇಕಾದ ಮಾರ್ಗಸೂಚಿಯನ್ನು ಪ್ರಕಟಿಸುವಲ್ಲಿಯೂ ಯುಪಿಎ ಸರ್ಕಾರದ ಕಡೆಯ ಬಜೆಟ್ ಸೋತಿದೆ.

ನೇರ ಹಾಗೂ ಪರೋಕ್ಷ ತೆರಿಗೆಗಳನ್ನು ಕುರಿತಂತೆ ಕಸರತ್ತು ಮಾಡುವ ಮೂಲಕ ಕೆಲವು ವರ್ಗಗಳಿಗೆ ತೆರಿಗೆ ದರವನ್ನು ಏರಿಸಲಾಗಿದ್ದು, ವೆಚ್ಚದ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಲಾಗಿದೆ/ಅಗತ್ಯಕ್ಕಿಂತ ಕಡಿಮೆ ನಿಗದಿ ಪಡಿಸಲಾಗಿದೆ. ಈ ಒಂದು ವೆಚ್ಚದ ಕಡಿತ/ಕೊರತೆ ನಿಗದಿಯಿಂದಲೇ ಈ ವರ್ಷ ಮತ್ತು ಮುಂದಿನ ವರ್ಷದ ವಿತ್ತೀಯ ಕೊರತೆಯನ್ನು ಸರಿದೂಗಿಸುವ ಪ್ರಯತ್ನ ಮಾಡಲಾಗಿದೆ. ವಿಸ್ತೃತ ಬಜೆಟ್ ದಾಖಲೆಯಲ್ಲಿ ಇಂತಹ ಹಲವಾರು ಉದಾಹರಣೆಗಳು ಕಾಣಬಹುದಾಗಿದೆ. ಆಹಾರ ವಿನಾಯತಿ ಮಸೂದೆಗೆ 75,000 ಕೋಟಿ ರೂಪಾಯಿಗಳನ್ನು ಪ್ರಸ್ತಾಪಿಸಲಾಗಿದೆ. ಆದರೆ ಪರಿಷ್ಕೃತ ಅಂದಾಜು ವೆಚ್ಚವನ್ನು 85,000 ಕೋಟಿ ರೂಪಾಯಿ ಎಂದು ತೋರಿಸಲಾಗಿದೆ. ಮುಂದಿನ ವರ್ಷದ ಮುಂಗಡ ಅಂದಾಜಿಗೆ ಈ ಮೊತ್ತವನ್ನು 80,000 ಕೋಟಿ ರೂಪಾಯಿಗಳಿಗೆ ಇಳಿಸಲಾಗಿದೆ ಹಾಗೂ 10,000 ಕೋಟಿ ರೂಪಾಯಿಗಳ ಹೆಚ್ಚುವರಿ ಅನುದಾನವನ್ನು ಆಹಾರ ಭದ್ರತಾ ಮಸೂದೆಯಡಿ ನೀಡಿರುವುದಾಗಿ

ಹಣಕಾಸು ಸಚಿವರು ಹೇಳಿದ್ದಾರೆ. ಕಡೆಗೆ ಅನ್ವಯವಾಗುವ ಮೊತ್ತ ಕೇವಲ 5000 ಕೋಟಿ ರೂಪಾಯಿಗಳಾಗಿದ್ದು, ಆಹಾರ ವಿನಾಯತಿಯ ಮೇಲೆ ಇದರ ಪ್ರಭಾವ ಕನಿಷ್ಠದ್ದಾಗಿರುತ್ತದೆ. ಆರೋಗ್ಯ ರಕ್ಷಣೆಗೆ, ಪ್ರಸ್ತುತ ಮುಂಗಡ ಪತ್ರವು 18,515 ಕೋಟಿ ರೂಪಾಯಿಗಳನ್ನು ಪ್ರಸ್ತಾಪಿಸಿದ್ದು, ಪರಿಷ್ಕೃತ ಅಂದಾಜು 15,411 ಕೋಟಿ ರೂಪಾಯಿಯಷ್ಟಿದೆ. ಮುಂದಿನ ವರ್ಷದ ಮುಂಗಡ ಪತ್ರದ ಅಂದಾಜು 3000 ಕೋಟಿಯ ಕನಿಷ್ಠ ಏರಿಕೆಯಾಗಿದೆ. ಪಂಚಾಯತ್ ರಾಜ್ ಸಂಸ್ಥೆಗೆ ವೆಚ್ಚ ಮಾಡುವ ಮೊತ್ತವು ಅತ್ಯಲ್ಪದ್ದಾಗಿದೆ. ಯುಪಿಎ ಸರ್ಕಾರದ ಆಧ್ಯತಾ ಕಾರ್ಯಕ್ರಮವಾದ ಉದ್ಯೋಗ ಖಾತ್ರಿ ಕಾರ್ಯಕ್ರಮ MGNREGAಗ 40,000 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ಈ ಕಾರ್ಯಕ್ರಮಕ್ಕೆ ನಿಗದಿಯಾದ ಮೊತ್ತವನ್ನು 33,000 ಕೋಟಿ ರೂಪಾಯಿಯಷ್ಟು ತಗ್ಗಿಸಲಾಗಿದೆ. ಪ್ರಸ್ತುತ ವರ್ಷದ ನೈಜ ಪ್ರಸ್ತಾಪಗಳು 29,387 ಕೋಟಿಯಷ್ಟಿದೆ. ಮುಂದಿನ ವರ್ಷದ ನೈಜ ವೆಚ್ಚ ಇದಕ್ಕೂ ಕಡಿಮೆಯಿರುವ ಸಾಧ್ಯತೆಗಳಿವೆ. ಸಾಧಿಸಲು ಅಸಾಧ್ಯವೆಂದು ಗೊತ್ತಿದ್ದರು, ಹಣಕಾಸು ಸಚಿವರು ಪ್ರಸ್ತಾಪಿತ ಗುರಿಯನ್ನು 33,000 ಕೋಟಿಗೆ ತಗ್ಗಿಸಿದ್ದಾರೆ. ವೈಫಲ್ಯದ ಬಹುದೊಡ್ಡ ಉದಾಹರಣೆಯನ್ನು ಪ್ರಧಾನ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಗೆ ನೀಡಿರುವ 29,677 ಕೋಟಿ ರೂಪಾಯಿಗಳ ಮೊತ್ತದಲ್ಲಿ ಕಾಣಬಹುದು. ಹಾಲಿ ವರ್ಷದ ಪರಿಷ್ಕೃತ ಅಂದಾಜಿನ ಪ್ರಕಾರ ಇದಕ್ಕಾಗಿ ಶೇಕಡ 40ರಷ್ಟು ಅಂದರೆ 8100 ಕೋಟಿ ರೂಪಾಯಿ ಇಡಲಾಗಿದೆ. ಹಾಲಿ ವರ್ಷದಲ್ಲಿ ವೆಚ್ಚದ ಬಾಬ್ತನ್ನು 15,690 ಕೋಟಿ ರೂಪಾಯಿಯಷ್ಟು ನಿಗದಿ ಪಡಿಸಲಾಗಿದೆ.

ಯುಪಿಎ ಸರ್ಕಾರದ ಮತ್ತೊಂದು ಮಹತ್ವಾಕಾಂಕ್ಷೆಯ ಕಾರ್ಯಕ್ರಮವೆಂದರೆ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಯೋಜನೆ. ಎಲ್ಲಾ 26 ಯೋಜನೆಗಳಿಗೆ ನಿಗದಿಯಾದ ಆಯವ್ಯಯ ಬೆಂಬಲವೆಂದರೆ 5595.02 ಕೋಟಿಗಳು. ಈವರೆಗೂ ಇದರಡಿ ಕೇವಲ 5.38 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಭಾರತೀಯ ರಾಜಕೀಯ ವಲಯದಲ್ಲಿ ಈ ಯೋಜನೆಯನ್ನು ಪ್ರಭಾವಿ ಯೋಜನೆಯೆಂದು ಬಣ್ಣಿಸಲಾಗಿತ್ತು.

ಈ ಮುಂಗಡ ಪತ್ರದಲ್ಲಿ ಎಚ್ಚರಿಕೆಯಿದೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ವಿನಾಯತಿ 96980 ಕೋಟಿ ರೂಪಾಯಿಯಷ್ಟಿದ್ದು ಅದನ್ನು 65,000 ಕೋಟಿ ರೂಪಾಯಿಗೆ ಇಳಿಸುವ ಅಗತ್ಯವಿದೆ. ಪೆಟ್ರೋಲ್, ಡೀಸಲ್ ಹಾಗೂ ಅನಿಲದ ಬೆಲೆಗಳು ಮತ್ತಷ್ಟು ಹೆಚ್ಚಲಿವೆ ಎಂಬ ಸಂಕೇತವನ್ನು ಇದು ನೀಡುತ್ತದೆ.

ಮುಂಗಡ ಪತ್ರವು ನೀತಿ ಸೂಚಿಯಾಗಿದೆ. ಇದೊಂದು ನಿರ್ದೇಶನಾತ್ಮಕ ಬದಲಾವಣೆಯನ್ನು ತರಲಾರದು. ಇದು ಕೇವಲ ಲೆಖ್ಖದ ಕಸರತ್ತಾಗಿದ್ದು, ಅದರಲ್ಲಿ ವೆಚ್ಚವನ್ನು ತಗ್ಗಿಸಲಾಗಿದ್ದು, ಭವಿಷ್ಯದಲ್ಲಿ ಅದರ ಹೆಚ್ಚಳದ ಯಾವುದೇ ಆಶಾ ಭಾವನೆ ಮೂಡುವುದಿಲ್ಲ. ಇದರಿಂದ ವೃದ್ಧಿ ದರಕ್ಕೆ ಯಾವುದೇ ಉತ್ತೇಜನವಿಲ್ಲ. ಬಡವರು ಮತ್ತು ದುರ್ಬಲ ವರ್ಗದ ಜನರು ಹಾಗೂ ಮಧ್ಯಮ ವರ್ಗದವರು ಇದರ ಪ್ರಕೋಪಕ್ಕೆ ನೇರ ತುತ್ತಾಗಲಿದ್ದಾರೆ.

(ಆರ್.ಕೆ.ಸಿನ್ಹಾ)

ಕಾರ್ಯದರ್ಶಿ

ಭಾಜಪ ಸಂಸದೀಯ ಪಕ್ಷ